ಅಸಲು ದಾವಾ ಸಂಖ್ಯೆ557/2023

ಪಿ.ಡಬ್ಲ್ಯು:3

**ದಿನಾಂಕ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು : ಶ್ರೀ . ಡಿ.ಎಸ್.ಎನ್. ಪ್ರತಿವಾದಿ ಪರ ವಕೀಲರಿಂದ**

ನಾನು ಹುಟ್ಟಿದಾಗಿನಿಂದ ನಾಗಗೊಂಡನಹಳ್ಳಿಯಲ್ಲಿ ವಾಸವಿದ್ದೇನೆ. ವಾದಿಯ–ಪ್ರತಿವಾದಿಯ ತಂದೆ ಮತ್ತು ನಾವು ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು. ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಪ್ರತಿವಾದಿ ಹೇಳಿ ಬರೆಯಿಸಿದ್ದಾರೆ. ನಾನು ವಾದಿ ಪರ ಸಾಕ್ಷ್ಯ ನುಡಿಯಲು ಬಂದಿದ್ದೇನೆ. ಕರಿಯಪ್ಪರವರಿಗೆ 6 ಜನ ಮಕ್ಕಳು. ಅವರೆಂದರೆ ನಾಗರಾಜಪ್ಪ, ಹಾಲಪ್ಪ, ರುದ್ರಮ್ಮ, ಗಂಗಮ್ಮ ಮತ್ತು ರತ್ನಮ್ಮ. ಹಾಲಪ್ಪರವರು ಸ.ನಂ.6 ರಲ್ಲಿ 17 ಗುಂಟೆ, ಸ.ನಂ.24 ರಲ್ಲಿ 1 ಎಕರೆ 5.½ ಗುಂಟೆ, ಸ.ನಂ.11 ರಲ್ಲಿ 20 ಗುಂಟೆ ಮತ್ತು ಸ.ನಂ.2 ರಲ್ಲಿ 1.¾ ಗುಂಟೆ ಸ್ವತ್ತಿನಲ್ಲಿ ಸ್ವಾಧೀನ ಹೊಂದಿದ್ದಾರೆ. ಸದರಿ ಸ್ವತ್ತುಗಳನ್ನು ಪ್ರತಿವಾದಿಯು ನೋಟರಿ ಪತ್ರದ ಮೂಲಕ ವಾದಿಗೆ ನೀಡಿದ್ದಾರೆ. ಸದರಿ ಪತ್ರಕ್ಕೆ ನಾನು 2002 ರಲ್ಲಿ ಸಹಿ ಮಾಡಿದ್ದೇನೆ. ನನ್ನ ಸಮಕ್ಷಮ ಹನುಮಂತಪ್ಪ, ನಂಜುಡಪ್ಪ, ಕರಿಯಪ್ಪ ಮತ್ತು ನಾಗರಾಜಪ್ಪ ಮತ್ತು ಇತರೇ 7–8 ಜನ ಸಹಿ ಮಾಡಿದ್ದಾರೆ.

ರುದ್ರಮ್ಮರವರು 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅ.ದಾ.ಸಂಖ್ಯೆ256/2022 ರಲ್ಲಿ ನಾಗರಾಜಪ್ಪ, ಹಾಲಪ್ಪ, ಕರಿಯಮ್ಮ ಗಂಗಮ್ಮ ಮತ್ತು ರತ್ನಮ್ಮ ವಿರುದ್ಧ ವಿಭಾಗಕ್ಕೆ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಹಾಲದಹಳ್ಳಿ ಗ್ರಾಮದ ಸ.ನಂ. 27 ವಿಸ್ತೀರ್ಣ 20 ಗುಂಟೆ ಮತ್ತು ನಾಗಗೊಂಡನಹಳ್ಳಿ ಗ್ರಾಮದ ಸ.ನಂ.6 ರ ಪೈಕಿ 1 ಎಕರೆ 5 ಗುಂಟೆ ಸ್ವತ್ತಿನಲ್ಲಿ ವಾದಿಗೆ ಭಾಗವಾಗಿರುವುದನ್ನು ವಾದಿಯು ನನಗೆ ತಿಳಿಸಿಲ್ಲ. ಸದರಿ ದಾವೆಯಲ್ಲಿ ರುದ್ರಮ್ಮರವರು ದಾವಾ

ಸ್ವತ್ತುಗಳನ್ನು ಸೇರ್ಪಡೆ ಮಾಡಿದ್ದರು ಎಂದರೆ ಗೊತ್ತಿಲ್ಲ. ರುದ್ರಮ್ಮರವರು ಸದರಿ ದಾವೆ ಸಲ್ಲಿಸಿದ ಬಗ್ಗೆ ವಾದಿಯು ನನಗೆ ತಿಳಿಸಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿಯ ಹಿಸ್ಸೆಗೆ ನ್ಯಾಯಾಲಯವು ಮಾಡಿದೆ ಎಂದು ಹೇಳಲಾದ ನಿರ್ಣಯದ ಬಗ್ಗೆ ವಾದಿಯು ನನಗೆ ತಿಳಿಸಿಲ್ಲ. ಅ.ದಾ.ಸಂಖ್ಯೆ 256/2022 ರಲ್ಲಿ ನ್ಯಾಯಾಲಯವು ಪಕ್ಷಗಾರರಿಗೆ ನೀಡಿರುವ ಭಾಗಾಂಶ ನಿರ್ಣಯದ ಬಗ್ಗೆ ವಾದಿಯು ನನಗೆ ತಿಳಿಸಿಲ್ಲ. ಸದರಿ ದಾವೆಯ ಮೇಲೆ ಕಡೂರಿನ ಘನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ರುದ್ರಮ್ಮರವರು ಸಲ್ಲಿಸಿರುವ ಮೇಲ್ಮನವಿಯ ಬಗ್ಗೆ ವಾದಿಯು ನನಗೆ ತಿಳಿಸಿಲ್ಲ.

ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ದಾವಾ ಸ್ವತ್ತುಗಳಲ್ಲಿ ವಾದಿಯು ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. 2022 ರಲ್ಲಿ ಕಡೂರಿನ ನ್ಯಾಯಾಲಯವು ವಿಭಾಗಾಂಶದ ತೀರ್ಪನ್ನು ಮಾಡಿದ್ದರೂ ಸಹ, ನಾನು ವಾದಿಯ ಮಾತು ಕೇಳಿಕೊಂಡು ವಾದಿಯು ದಾವಾ ಸ್ವತ್ತುಗಳಲ್ಲಿ ಸ್ವಾಧೀನ ಹೊಂದಿಲ್ಲದೇ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

**Sd/-05.06.26**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಕಡೂರು